| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 573/2020**

**ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 1**

ಸಾಕ್ಷಿದಾರನ ಹೆಸರು : ಕೇಶವ
ತಂದೆಯ ಹೆಸರು : ನಾರಯಣ
ಪ್ರಾಯ : 28 ವರ್ಷ
ಉದ್ಯೋಗ : ಎಲೆಕ್ಟ್ರೀಶನ್
ವಾಸ : ಸಿದ್ದಪುರ

ದಿನಾಂಕ 26.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-2 ರಿಂದ 9 ರವರ ಪರಿಚಯ ಇದೆ. ಅವರು ನನ್ನೊಂದಿಗೆ ಘಟನೆ ದಿನ ಕೆಲಸ ಮಾಡುತ್ತಿದ್ದವರು. ಮೃತ ಗುರುರಾಜ್ ರವರ ಪರಿಚಯ ಇದೆ. ಅವರು ನನ್ನೊಂದಿಗೆ ಘಟನೆ ದಿನ ಕೆಲಸ ಮಾಡುತ್ತಿದ್ದವರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸುಮಾರು 2-3 ವರ್ಷಗಳ ಹಿಂದೆ ಬೆಳಿಗ್ಗೆ 11.00 ಗಂಟೆಗೆ ಕಬ್ಬಿನಾಲೆಯಲ್ಲಿ ಮುರಿದ ವಿದ್ಯುತ್ ಕಂಬವನ್ನು ತೆಗೆದು ಹೊಸ ಕಂಬವನ್ನು ಅಳವಡಿಸುವ ಕೆಲಸಕ್ಕೆ ಹೋಗಿದ್ದು, ಸ್ಥಳಕ್ಕೆ ಹೋಗಿ ನೋಡಲಾಗಿ ವಿದ್ಯುತ್ ಕಂಬ ಮುರಿದು ವೈಯರ್ ಗಳು ಕಂಬದಲ್ಲಿ ನೇತಾಡುತ್ತಿದ್ದವು. ಕಂಬವು ಪೂರ್ತಿಯಾಗಿ ಮುರಿಯದಿದ್ದ ಕಾರಣ ಹೊಸ ಕಂಬವನ್ನು ಅಳವಡಿಸಲು ಮುರಿದ ಕಂಬವನ್ನು ಕೆಳಗೆ ಬೀಳಿಸುವ ಸಲುವಾಗಿ ತುಂಡಾದ ವಿದ್ಯುತ್ ಕಂಬದಲ್ಲಿನ ವೈಯರ್ ಗಳನ್ನು ನಾನು, ಚಾಸಾ-2, 4, 6 ಮತ್ತು ಮೃತ ಗುರುರಾಜ್ ಹಿಡಿದು ಎಳೆಯುತ್ತಿರುವಾಗ ಗುಡುಗು ಸಿಡಿಲು ಬಂದಾಗ ವೈಯರ್ ನಲ್ಲಿ ವಿದ್ಯುತ್ ಹರಿದ ಪರಿಣಾಮ ಗುರುರಾಜ್ ರವರು ಮೃತಪಟ್ಟಿರುತ್ತಾರೆ. ಚಾಸಾ-2 ರವರಿಗೆ ಬಲಕೈಗೆ

ಗಾಯವಾಗಿರುತ್ತದೆ. ಚಾಸಾ-4 ರವರಿಗೆ ಕೈಗೆ ಗಾಯವಾಗಿರುತ್ತದೆ. ನಂತರ ನಾನು, ಚಾಸಾ-2 ರಿಂದ 6 ರವರು ಸೇರಿಕೊಂಡು ಗುರುರಾಜ್ ರವರನ್ನು ಹೆಬ್ರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿಯ ವೈದ್ಯರು ಗುರುರಾಜ್ ರವರನ್ನು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇವೆ. ಸಾಕ್ಷಿಯು ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಿರ್ಯಾದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಸ್ಥಳ ಮಹಜರು ಮಾಡಿರುವುದಿಲ್ಲ. ಸಾಕ್ಷಿಯು ತಕ್ಷೀರು ಸ್ಥಳ ಮಹಜರು ಮತ್ತು ಕಚ್ಚಾ ನಕಾಶೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ತಕ್ಷೀರು ಸ್ಥಳ ಮಹಜರನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಕಚ್ಚಾ ನಕಾಶೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗಳಿಗೆ 2-3 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ-1 ರಿಂದ 7 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಘಟನೆಯ ಕುರಿತು ಪೊಲೀಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಘಟನೆಯು ಯಾರ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

2. ದಿಃ01.08.2019 ರಂದು ಪೊಲೀಸರು ಕಬ್ಬಿನಾಲೆ ಗ್ರಾಮದ ಕುಚ್ಚೂರಿನ ಹಿಂಡು ಎಂಬಲ್ಲಿ ಶೇಖರ್ ಗೌಡರ ಮನೆಯ ಬಳಿ ಘಟನಾ ಸ್ಥಳ ಮಹಜರು ಹಾಗೂ ನಕಾಶೆಯನ್ನು ನನ್ನ, ಚಾಸಾ-10 ಮತ್ತು 11 ರವರ ಸಮಕ್ಷಮ ತಯಾರಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ದಿಃ31.07.2019 ರಂದು ಶ್ರೀನಿವಾಸ್ ಹೆಬ್ಬಾರ್ ರವರು ಕಬ್ಬಿನಾಲೆ ಗ್ರಾಮದ ಕಚ್ಚೂರಿನ ಹಿಂಡು ಎಂಬಲ್ಲಿ ಶೇಖರ್ ಗೌಡರವರ ಮನೆಯ ಬಳಿ ಗಾಳಿ ಮಳೆಗೆ ತೆಂಗಿನ ಮರವು ಎಲ್ ಟಿ

ಎಲೆಕ್ಟ್ರೀಟಿಕ್ ವಯರ್ ಮೇಲೆ ಬಿದ್ದ ಕಾರಣ ವಿದ್ಯುತ್ ಕಂಬ ತುಂಡಾಗಿ ಅದರ ವಯರ್ ಗಳು ನೇತಾಡುತ್ತಿದ್ದು ಅದನ್ನು ಸರಿಮಾಡಬೇಕು ಎಂದು ನಮಗೆ ತಿಳಿಸಿರುತ್ತಾರೆ. ಅದರಂತೆ ನಾವು ಸ್ಥಳಕ್ಕೆ ಹೋಗುವಾಗ ದಾರಿ ಮಧ್ಯ ಲೈನ್ ಮೆನ್ ರಾಜು ರವರು ಸಿಕ್ಕಿದ್ದು ಅವರಲ್ಲಿ ಕೇಳಿದಾಗ ಅಲ್ಲಿಯ ಲೈನ್ ಅಫ್ ಮಾಡಿರುತ್ತೇನೆ ಲೈನ್ ಕೆಲಸ ಮಾಡಬಹುದು ಎಂದು ತಿಳಿಸಿದ್ದು ಅದರಂತೆ ನಾನು ಹಾಗೂ ನನ್ನೊಂದಿಗೆ ಚಾಸಾ-2 ರಿಂದ 4 ರವರು ಮಧ್ಯಾಹ್ನ 1.30 ಗಂಟೆಗೆ ನೇತಾಡುತ್ತಿದ್ದ ಎಲ್ ಟಿ ವಿದ್ಯುತ್ ವಯರ್ ನ್ನು ಕೈಯಿಂದ ಹಿಡಿದು ಎಳೆದಾಗ ವಿದ್ಯುತ್ ವಯರ್ ವಿದ್ಯುತ್ ಕಂಬದಿಂದ ತಪ್ಪಿ ಅಡಿಕೆ ಮರದ ಮೇಲೆ ಬಿದ್ದು ಕೊಂಡಿರುವ ಎಲ್ ಟಿ ವಿದ್ಯುತ್ ವೈಯರ್ ಗಳು ಅಡಿಕೆ ಮರ ಸಮೇತ ಒಮ್ಮೆಲೆ ನೇರವಾಗಿ ಸುಮಾರು 80 ಮೀಟರ್ ದೂರದಲ್ಲಿ ಹಾದುಹೋಗಿರುವ ವಿದ್ಯುತ್ ಕಂಬದಲ್ಲಿರುವ ಹೆಟೆನ್ಷನ್ ವೈಯರ್ ಗೆ ತಾಗಿ ಒಮ್ಮೆಲೆ ಎಲ್ ಟಿ ವೈಯರ್ ನಲ್ಲಿ ವಿದ್ಯುತ್ ಹರಿದು ಕೆಲಸ ಮಾಡುತ್ತಿದ್ದ ಚಾಸಾ-2 ರಿಂದ 4 ಮತ್ತು ಮೃತ ಗುರುರಾಜ್ ರವರಿಗೆ ವಿದ್ಯುತ್ ಶಾಕ್ ಹೊಡೆದಿರುತ್ತದೆ. ಪರಿಣಾಮ ಚಾಸಾ-2 ರಿಂದ 4 ರವರಿಗೆ ಗಾಯಗಳಾಗಿದ್ದು ಗುರುರಾಜ್ ರವರು ಅಸ್ಪತ್ರೆಗೆ ಸಾಗಿಸುವ ದಾರಿ ಮಧ್ಯೆ ಮೃತಪಟ್ಟಿರುತ್ತಾರೆ ಎಂದು ನಾನು ಪಿರ್ಯಾದು ನೀಡಿರುತ್ತೇನೆ ಎಂದರೆ ಸರಿ. ಈ ಘಟನೆಯು 1 ರಿಂದ 3 ನೇ ಆರೋಪಿತರ ನಿರ್ಲಕ್ಷತನದಿಂದ ಸಂಭವಿಸಿರುತ್ತದೆ ಎಂದು ಪಿರ್ಯಾದು ನೀಡಿರುತ್ತೇನೆ ಎಂದರೆ ಸರಿ.

<u>**ಪಾಟೀ ಸವಾಲು**</u> : 2 ನೇ ಆರೋಪಿ ಪರ : ಶ್ರೀ ಪಿ ಎ ಎಸ್ ವಕೀಲರಿಂದ :

ಘಟನೆಯಾಗಿದೆ ಎಂದು ಹೇಳುವ ಒಂದುವರೆ ವರ್ಷಗಳ ಹಿಂದಿನಿಂದ 2 ನೇ ಅರೋಪಿಯ ಬಳಿ ಕೆಲಸ ಮಾಡುತ್ತಿದ್ದೆ. ಎಲೆಕ್ಟ್ರಿಕ್ ಕಂಬದ ಎತ್ತರ 6 ಮೀಟರ್. ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಇರುವ ಅಂತರ 22 ಮೀಟರ್. ಹೈಟೆನ್ಷನ್

ವಯರ್ ಇರುವಂತಹ ಕಂಬಗಳು 80 ಮೀಟರ್ ದೂರದಲ್ಲಿ ಇದ್ದವು. ಅವುಗಳ ಎತ್ತರ ನೆಲದಿಂದ 33-35 ಮೀಟರ್ ಇರಬಹುದು. ಅಪಘಾತ ಸಮಯದಲ್ಲಿ ಕಂಬಗಳಿಂದ ಎಲೆಕ್ಟ್ರಿಕ್ ವಯರ್ ಗಳನ್ನು ಕಳಚಿರಲಿಲ್ಲ ಮತ್ತು ಅದು ಕಂಬದಲ್ಲಿ ಬಿಗಿಯಾಗಿ ಕಟ್ಟಲಾಗಿತ್ತು. ಯಾವುದೇ ವಯರ್ ತುಂಡಾಗಿರಲಿಲ್ಲ. 2 ಕಂಬಗಳು ತಲಾ 6 ಮಿ. ಇರುವುದರಿಂದ ಯಾವ ಕಡೆ ಬಿದ್ದರು ಅವುಗಳ ಅಂತರ 12 ಮಿ. ಗಿಂತ ಜಾಸ್ತಿ ಆಗುವುದಿಲ್ಲ ಎಂದರೆ ಸರಿ. 2 ಮರದ ಕಂಬಗಳು ನೆಲದಲ್ಲಿ ಹೂಳಲ್ಪಟ್ಟಿತ್ತು ಮತ್ತು ಅವುಗಳು ಬಗ್ಗಿದ್ದವು ಮತ್ತು ನೆಲದಿಂದ ಬೇರ್ಪಟ್ಟಿರಲಿಲ್ಲ. ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ವಿದ್ಯುತ್ ವಯರ್ ಗಳನ್ನು ಬಿಗಿಯಾಗಿ ಕಟ್ಟಿದ್ದರಿಂದ ಅವುಗಳು ಜೋತುಬಿದ್ದಿರಲಿಲ್ಲ. ನೆಲದಿಂದ ವಯರ್ ಗಳು ಯಾವ ರೀತಿಯಲ್ಲಿಯೂ ಮೇಲಕ್ಕೆ ಎಸೆಯಲ್ಪಟ್ಟರು 35 ಮಿಟರ್ ಎತ್ತರಕ್ಕೆ ಹೋಗುವುದಿಲ್ಲ ಹಾಗೂ 80 ಮೀಟರ್ ದೂರವನ್ನು ಕ್ರಮಿಸುವುದಿಲ್ಲ. ಅಡ್ಡ ಬಿದ್ದಂತಹ ಕಂಬದ ವಯರ್ ಗಳು 6 ಮೀಟರ್ ಗಿಂತ ಹೆಚ್ಚು ಹೋಗಲು ಸಾಧ್ಯವಿಲ್ಲ. ಈ ವಯರ್ ಗಳು ಘಟನ ಸಮಯದಂದು ಹೈಟೆನ್ಷನ್ ವಯರ್ ಗೆ ತಾಗಿದ್ದನ್ನು ನಾನು ನೋಡಿರುವುದಿಲ್ಲ. ಹೈಟೆನ್ಷನ್ ವಯರ್ ಗಳು 35 ಮೀ ಎತ್ತರ ಮತ್ತು 80 ದೂರದಲ್ಲಿ ಇದ್ದ ಕಾರಣ ಲೊ ಟೆನ್ಷನ್ ನ ಮುರಿದು ಬಿದ್ದ ಕಂಬದ ವಯರ್ ಗಳು ಅಷ್ಟು ದೂರ ಮತ್ತು ಎತ್ತರಕ್ಕೆ ಕ್ರಮಿಸಲು ಸಾಧ್ಯವಿಲ್ಲ ಎಂದರೆ ಸರಿ.

ಘಟನಾ ಸಮಯದಲ್ಲಿ ಲೊ ಟೆನ್ಷನ್ ವಯರ್ ನಲ್ಲಿ ವಿದ್ಯುತ್ ಸಂಚಾರ ಇರಲಿಲ್ಲ. ವಿದ್ಯುತ್ ಸಂಪರ್ಕ ಇರಲಿಲ್ಲ, ನಾವು ಹಾಗೂ ಲೈನ್ ಮೆನ್ ಅದನ್ನು ಪರಾಂಭರಿಸಿ ದೃಢಿಕರಿಸಿದ್ದೇವೆ. ಆ ನಂತರ ಕೆಲಸ ಮಾಡಲು ಪ್ರಾರಂಭಿಸಿರುತ್ತೇವೆ. ಹೈ ಟೆನ್ಷನ್ ನ ಕಂಬ ಸಮೀಪ ವಿದ್ಯುತ್ ವಯರ್ ನ್ನು ಚಾಸಾ-3 ಹಿಡಿದುಕೊಂಡಿದ್ದು ಮೃತ ಗುರುರಾಜ್ ರವರು ಕೊನೆಯಲ್ಲಿದ್ದರು. ಹೈ ಟೆನ್ಷನ್ ವಯರ್ ನಿಂದಾಗಿ ಶಾಕ್ ಹೊಡೆದಿದ್ದರೆ ಮೊದಲು ಪ್ರಾರಂಭದಲ್ಲಿ ಇದ್ದ ಚಾಸಾ-3 ರವರಿಗೆ ನಂತರ

ಕೊನೆಯಲ್ಲಿದ್ದ ಮೃತ ಗುರುರಾಜ್ ಗೆ ಶಾಕ್ ಹೊಡೆಯಬೇಕಿತ್ತು. ಹೈ ಟೆನ್ಷನ್ ನಿಂದ ಪ್ರಸವಿಸಿದ ವಿದ್ಯುತ್ ನಿಂದ ಚಾಸಾ-3 ರವರಿಗೆ ಯಾವುದೇ ವಿದ್ಯುತ್ ಶಾಕ್ ಗಾಯ ಆಗಿರಲಿಲ್ಲ. ಚಾಸಾ-2 ರವರಿಗೂ ವಿದ್ಯುತ್ ನಿಂದ ಯಾವುದೇ ವಿದ್ಯುತ್ ಶಾಕ್ ಗಾಯ ಆಗಿರಲಿಲ್ಲ. ಅವರಿಗೂ ಸಹ ಬಿದ್ದು ತರಚಿದ ಗಾಯ ಆಗಿರುತ್ತದೆ.

ಘಟನೆ ನಡೆದಿದೆ ಎಂದು ಹೇಳುವ ಸಮಯ ಮಳೆಗಾಲ. ಮಳೆಗಾಲದಲ್ಲಿ ಹೆಚ್ಚಾರಿ ಗುಡುಗು ಮಿಂಚು ಇರುತ್ತದೆ. ಗುಡುಗು ಮಿಂಚಿನಿಂದ ಯಾವ ಬದಿಯಿಂದ ಗುಡುಗು ಹೊಡೆಯಿತೊ ಆ ಬದಿಯಿಂದ ವಿದ್ಯುತ್ ಪ್ರವಾಹಿಸುತ್ತದೆ ಎಂದರೆ ಸರಿ. ವಿದ್ಯುತ್ ತಂತಿಗಳು ಕಂಬದಿಂದ ಕಂಬಕ್ಕೆ ನೇರವಾಗಿ ಹಾದುಹೋಗಿದ್ದು ಅವುಗಳ ಕಂಬಗಳಿಗೆ ಹರಿಯದ ಹಾಗೆ ಇನ್ಸುಲೆಟರ್ ವ್ಯವಸ್ಥೆ ಇದೆ ಎಂದರೆ ಸರಿ. ಆ ವ್ಯವಸ್ಥೆ ಇದ್ದ ಕಾರಣ ಕಂಬಗಳಿಗೆ ನೇರವಾಗಿ ವಿದ್ಯುತ್ ಪ್ರವಾಹಿಸದೆ ನೇರವಾಗಿ ವಯರ್ ಗಳಿಂದ ವಯರ್ ಗಳಿಗೆ ಪ್ರವಾಹಿಸುತ್ತದೆ. ವಯರ್ ನಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದರೂ ಮಿಂಚಿನಿಂದಾಗಿ ವಿದ್ಯುತ್ ವಯರ್ ಗಳಲ್ಲಿ ವಿದ್ಯುತ್ ಪ್ರವಾಹಿಸುತ್ತದೆ ಎಂದರೆ ಸರಿ. ಮಿಂಚಿನ ಕಾರಣದಿಂದಾಗಿ ಮಳೆಗಾಲದಲ್ಲಿ ಮನೆಗಳಲ್ಲಿ ವಿದ್ಯುತ್ ಉಪಕರಣಗಳು ಸುಟ್ಟು ಹೋಗುತ್ತವೆ ಎಂದರೆ ಸರಿ. ಹೆಚ್ಚಿನ ಜನರು ತಮ್ಮ ಮನೆಗಳಲ್ಲಿ ಇಂತಹ ಅನಾಹುತ ಆಗುತ್ತದೆ ಎಂಬ ಕಾರಣಕ್ಕೆ ಮೈನ್ ಸ್ವಿಚ್ ನ್ನು ಆಪ್ ಮಾಡಿರುತ್ತಾರೆ. ಮಳೆಗಾಲದ ಸಮಯದಲ್ಲಿ ಮನೆಗಳಲ್ಲಿ ವಿದ್ಯುತ್ ಸ್ವಿಚ್ ಹಾಕುವಾಗ ಅಥವಾ ಮೊಬೈಲ್ ಚಾರ್ಜ್ ಹಾಕುವಾಗ ಮತ್ತು ಮೊಬೈಲ್ ಮಾತನಾಡುವಾಗ ಮಿಂಚು ಬರುವಾಗ ವಿದ್ಯುತ್ ಶಾಕ್ ಹೊಡೆದು ಮರಣ ಸಂಭವಿಸಿರುತ್ತದೆ ಎಂದರೆ ಸರಿ. ಅದೇ ರೀತಿ ಮರದ ಅಡಿಯಲ್ಲಿ ನಿಂತವರು ಸಹ ಮಿಂಚು ಹೊಡೆದ ಕಾರಣ ವಿದ್ಯುತ್ ಸಂಪರ್ಕ ಹೊಂದಿ ಸುಟ್ಟ ಗಾಯ ಸಂಭವಿಸಿ ಮರಣ ಹೊಂದುತ್ತಾರೆ ಎಂದರೆ ಸರಿ. ಆದ ಕಾರಣ ಮಳೆಗಾಲದಲ್ಲಿ ಸಿಡಿಲು

ಮಿಂಚು ಬರುವಾಗ ಮರದ ಅಡಿಯಲ್ಲಿ ಸಹ ಜನರು ನಿಲ್ಲಬಾರದು ಹಾಗೂ ಮೊಬೈಲ್ ನಲ್ಲಿ ಮಾತನಾಡಬಾರದು.

ಹೈ ಟೆನ್ಷನ್ ವಯರ್ ಕಂಬದ ಹತ್ತಿರ ಚಾಸಾ-3, ಚಾಸಾ-2, ಚಾಸಾ-4 ನಂತರ ಮೃತ ಗುರುರಾಜ್ ಇದ್ದರು. ಗುರುರಾಜ್ ರವರಿಂದ ಮೊದಲು ನಾನು ಇದ್ದೆ. ಹೈ ಟೆನ್ಷನ್ ವಯರ್ ನಿಂದ ವಿದ್ಯುತ್ ಸಂಪರ್ಕ ಬಂದಿದ್ದಲ್ಲಿ ಪ್ರಥಮ ಅಘಾತ ಚಾಸಾ-3 ರವರಿಗೆ ಆಗಬೇಕಿತ್ತು. ಮಿಂಚಿನ ಕಾರಣದಿಂದ ವಿದ್ಯುತ್ ವಿರುದ್ದ ದಿಕ್ಕಿನಿಂದ ಬಂದ ಪ್ರವೇಶಿಸಿದ ಕಾರಣ ಪ್ರಥಮವಾಗಿ ಮೃತ ಗುರುರಾಜ್ ರವರಿಗೆ ವಿದ್ಯುತ್ ಸಂಪರ್ಕವಾಯಿತು. ಮಿಂಚಿನಂದ ಆದ ಘಟನೆಗಳನ್ನು ನಾವು Act of God ಎಂದು ಪರಿಗಣಿಸಬಹುದು. 80 ಮೀಟರ್ ದೂರದಲ್ಲಿರುವ ಹೈ ಟೆನ್ಷನ್ ವಯರ್ ಇದ್ದ ಕಾರಣ ಅದರಿಂದಲೇ ಅವಘಡ ಸಂಭವಿಸಿರಬಹುದು ಎಂದು ನಾವು ನಂಬಿದ್ದೇವು. ಆ ನಂತರ ಈ ಅವಘಡವು ಮಿಂಚಿನಿಂದ ಆಗಿದೆ ಎಂದು ತಿಳಿಯಿತು. ಆ ವಿಷಯವನ್ನು ಪೊಲೀಸರಿಗೆ ಹೇಳಿರುತ್ತೇನೆ. ಮಿಂಚಿನ ಕಾರಣದಿಂದ ಮೃತಪಟ್ಟರೆ ಅವರ ಕುಟುಂಬಕ್ಕೆ ಪರಿಹಾರ ಸಿಗುವುದಿಲ್ಲ ಕೆಲಸದ ಸಮಯದಲ್ಲಿ ಮೃತಪಟ್ಟರೆ ಅವರ ಕುಟುಂಬಕ್ಕೆ ಪರಿಹಾರ ಸಿಗುತ್ತದೆ ಆದ ಕಾರಣ ಪೊಲೀಸರು ಹೇಳಿದಂತೆ ಪಿರ್ಯಾದು ಬರೆದುಕೊಟ್ಟಿರುತ್ತೇನೆ. ಆ ಕಾರಣಕ್ಕಾಗಿ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಹೇಳಿರುತ್ತೇನೆ. ನಿಪಿ-2 ಭಾವಚಿತ್ರದಲ್ಲಿ ಹೈ ಟೆನ್ಷನ್ ವಯರ್ ಎಷ್ಟು ದೂರದಲ್ಲಿ ಇದೆ ಎಂದು ಗೊತ್ತಾಗುವುದಿಲ್ಲ. ಅದೇ ಪ್ರಕಾರ ನಕ್ಷೆಯಲ್ಲಿ ಹೈ ಟೆನ್ಷನ್ ವಯರ್ ಎಷ್ಟು ದೂರದಲ್ಲಿ ಇದೆ ಎಂದು ಕಾಣಿಸಿರುವುದಿಲ್ಲ. ಒಂದು ವೇಳೆ ಹೈ ಟೆನ್ಷನ್ ವಯರ್ ಗಳು ಲೊ ಟೆನ್ಷನ್ ವಯರ್ ನಿಂದ ನಿಲುಕುವಷ್ಟು ಅಂತರದಲ್ಲಿದ್ದರೆ ಅದನ್ನು ನಕ್ಷೆಯಲ್ಲಿ ಕಾಣಿಸಲಾಗುತ್ತಿತ್ತು ಮತ್ತು ನಿಪಿ-2 ಭಾವಚಿತ್ರದಲ್ಲ್ ಕಾಣುತ್ತಿತ್ತು. ಅವುಗಳು ನಿಲುಕುವಷ್ಟು ಅಂತರದಲ್ಲಿ ಇರದಿದ್ದ ಕಾರಣ ಅವುಗಳನ್ನು ನಕ್ಷೆಯಲ್ಲಿ

ಕಾಣಿಸಿರುವುದಿಲ್ಲ. ಈ ಪ್ರಕರಣದಲ್ಲಿ ಪೊಲೀಸರು ಹೇಳಬೇಕು ಎಂದು ಪೊಲೀಸರು ತಯಾರಿಸಿದ ದಾಖಲೆಗೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ಮೃತ ಗುರುರಾಜ್ ರವರಿಗೆ ಮಿಂಚಿನ ಕಾರಣದಿಂದ ವಿದ್ಯುತ್ ಶಾಕ್ ಹೊಡೆದಿದೆ ಹೈ ಟೆನ್ಷನ್ ನಿಂದ ಅಲ್ಲ ಎಂದರೆ ಸರಿ. ಪೊಲೀಸರು ಹೇಳಿದಂತೆ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಮತ್ತು ಭಾವಚಿತ್ರ ತೆಗೆಸಿಕೊಂಡಿರುತ್ತೇನೆ.

**ಪಾಟೀ ಸವಾಲು** : 1 ಮತ್ತು 3ನೇ ಆರೋಪಿತರ ಪರ : ಶ್ರೀ ಎಸ್ ಕೆ ಜೆ ವಕೀಲರು 2ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ